THE TIMES OF INDIA
Dated, Friday, 07th July– 2017
Pg.No.13

# Now, students will have a say in accreditation of varsities

## Assessment Digitised After Graft Plaints

Manash.Gohain
@timesgroup.com

**NEW METHODOLOGY**

**ASSESSMENT & ACCREDITATION OF UNIVERSITIES**

**STAGE1 IIQA (Institutional Information for Quality Assessment)**
Institutions to provide information online & publish it on websites

**STAGE2 QIF Quality Indicator Framework**
- Data collection in the given form
- Validation & verification of data
- Online Student Satisfaction Survey
- Quantitative evaluation process
- On-site assessment by peer team

**STAGE3 Grading & Accreditation**
CGPA computed on a seven-point scale

**New Delhi:** Like universities abroad, students in India will now have a say in assessment and accreditation of their institutions. The National Assessment and Accreditation Council (NAAC), which launched its new methodology for grading universities, will give 20% weightage to online student satisfaction survey (SSS) while offering accreditation from this year.

Following complaints of corrupt practices during assessment, NAAC has made the new methodology completely digitised with less human intervention. It will aslo do away with subjectivity in assessment and grading of higher education institutions.

The council re-opened the process for universities to apply for assessment on Thursday. The move comes after the HRD ministry had in March asked for a complete overhaul of the accreditation process after concerns were raised over inferior institutions being granted good grades. The new methodology gives just 20% weightage to peer team assessment instead of 100% as in the past in deciding the grade of an institution.

In top universities across the globe, students' feedback for faculty/courses is mandatory and an important aspect of assessment. Many universities use this as an internal ranking parameter as well.

According to sources, NAAC's SSS will carry 20% weightage during the assessment and grading. Institutions will have to provide email IDs of students and an online survey will be conducted. "The online survey will be done in the second stage of the assessment," said Virander Singh Chauhan, chairperson of University Grants Commission.

The MHRD, according to sources, had also asked the council to outsource the entire travel and logistics of the peer team. "Till now the institutions used to arrange the logistics of the peer team. From now on, they will have no say in this matter and till the last moment the institution will not know who is visiting them for the on site assessment," said a ministry official.

Divulging more about the new process, the official said, "NAAC is planning to get data submitted by an institution via Quality Indicator Framework (Self Study Report SSR), validated by an external agency using technology."

NAAC stopped the online application process in March 2017 and it convened a consultative meet in Delhi in April 2017 to frame the accreditation guidelines. According to sources, the online application for colleges are likely to commence from August.

DECCAN HERALD



# Panel to consult all stakeholders on bill to regulate private hospitals



**MLA K N Rajanna (second from right) chairs the first meeting of Select Committee of the Legislature on Karnataka Private Medical Establishments (Amendment) Bill, 2017, at the Vidhana Soudha on Thursday. (From right) Health Minister Ramesh Kumar, legislators K S Eshwarappa and Basavaraj Horatti are seen.** DH PHOTO

**BENGALURU:** Health and Family Welfare Minister K R Ramesh Kumar on Thursday said the select committee of the legislature will hold consultation with all the stakeholders before preparing its report on the controversial bill to regulate private hospitals.

Speaking to reporters after participating in the first meeting of the committee at the Vidhana Soudha, the minister said the state government's intention is not to trouble private medical establishments. Medical doctors need not panic. The bill is intended at protecting the interest of poor patients, he added.

The Karnataka Private Medical Establishments (Amendment) Bill, 2017 seeks to fix rates for all treatments and penalise hospitals for violations of any of its provisions. When the government sought the approval of the state legislature for the bill in the recently concluded session, members cutting across party lines opposed it, saying that it will lead to harassment of medical doctors. The government finally referred the bill to the select committee of legislature to examine it.

The 17-member joint select committee headed by senior Congress MLA K N Rajanna has been given two months' time to submit its report to the legislature. Rajanna said the report will be submitted within the stipulated time.

Ramesh Kumar said the government will convene a special session of the legislature, if necessary, to discuss the bill.

**DH News Service**

# ಖಾಸಗಿ ಆಸ್ಪತ್ರೆಗಳ ನಿಯಂತ್ರಣ: ಜಂಟಿ ಸದನ ಸಮಿತಿ ಸಭೆ

■ **ವಿಕ ಸುದ್ದಿಲೋಕ** ಬೆಂಗಳೂರು

ಖಾಸಗಿ ಆಸ್ಪತ್ರೆಗಳ ನಿಯಂತ್ರಣ ಸಂಬಂಧ ತರಲಾಗಿರುವ ವಿಧೇಯಕದ ಬಗ್ಗೆ ಅಡ್ವೊಕೇಟ್ ಜನರಲ್ ಸೇರಿದಂತೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದುವರಿಯಲಾಗುವುದು ಎಂದು ಈ ಕುರಿತ ಜಂಟಿ ಸದನ ಸಮಿತಿ ಅಧ್ಯಕ್ಷ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ.

ಸದನ ಸಮಿತಿಯ ಮೊದಲ ಸಭೆ ನಡೆಸಿದ ಬಳಿಕ ವಿಧಾನಸೌಧದಲ್ಲಿ ಗುರುವಾರ ಮಾತನಾಡಿದ ಅವರು, ''ಖಾಸಗಿ ಆಸ್ಪತ್ರೆಗಳಿಗೆ ತೊಂದರೆ ಕೊಡುವ ಉದ್ದೇಶ ಸರಕಾರಕ್ಕಿಲ್ಲ, ಆದರೆ, ಬಡವರ ಹಿತರಕ್ಷಣೆಯಿಂದ ಹಿಂದೆ ಸರಿಯುವ ಪ್ರಶ್ನೆಯೂ ಇಲ್ಲ. ಈ ಹಿನ್ನೆಲೆಯಲ್ಲಿ ಖಾಸಗಿ ವೈದ್ಯಕೀಯ ಸೇವೆಗಳ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ,'' ಎಂದರು.

''ಖಾಸಗಿ ಆಸ್ಪತ್ರೆಗಳು ತಮ್ಮ ಪಾಡಿಗೆ ಜನಸೇವೆ ಮಾಡಿಕೊಂಡಿದ್ದರೆ ಸಮಸ್ಯೆಯೇ ಆಗುವುದಿಲ್ಲ. ಕಾಯಿದೆಗೆ ತಿದ್ದುಪಡಿ ತರುತ್ತಿರುವುದರಿಂದ ಖಾಸಗಿಯವರು ಭಯ ಬೀಳುವ ಅಗತ್ಯವೂ ಇಲ್ಲ. ಆಸ್ಪತ್ರೆ ಪ್ರತಿನಿಧಿಗಳು, ಸರಕಾರೇತರ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಕಾನೂನು ಪರಿಣಿತರೊಂದಿಗೆ ಸಮಾಲೋಚಿಸಲಾಗುವುದು. ಈ ಕಾಯಿದೆ ಕಾನೂನುಬದ್ಧವಾಗಿ ನಿಲ್ಲುವುದಿಲ್ಲವೆಂದು ನ್ಯಾ. ಸಂತೋಷ್ ಹೆಗ್ಡೆ ಹೇಳಿರುವುದು ಗಂಭೀರ ವಿಚಾರ. ಈ ಕುರಿತು ಅಡ್ವೊಕೇಟ್ ಜನರಲ್ ಅವರೊಂದಿಗೆ ಮಾತುಕತೆ ನಡೆಸಿ ಸಲಹೆ ಪಡೆಯಲಾಗುವುದು. 5 ವಾರದ ಒಳಗೆ ವರದಿ ಸಲ್ಲಿಸಲಾಗುವುದು. ಅದಾದ ಬಳಿಕ ವಿಧೇಯಕ ಸಂಬಂಧ ವಿಧಾನಮಂಡಲ ಅಧಿವೇಶನ ಕರೆಯಬೇಕೊ, ಬೇಡವೊ ಎಂದು ನಿರ್ಧರಿಸಲಾಗುವುದು,'' ಎಂದರು.

ಖಾಸಗಿ ಆಸ್ಪತ್ರೆಗಳ ನಿಯಂತ್ರಣ ವಿಧೇಯಕ ಅಂಗೀಕರಿಸಲು ಅಗತ್ಯ ಕಂಡರೆ ವಿಶೇಷ ಅಧಿವೇಶನ ಕರೆಯಲಾಗುವುದು ಎಂದು ಇದೇ ವೇಳೆ ಆರೋಗ್ಯ ಸಚಿವ ರಮೇಶ್‌ಕುಮಾರ್ ಪ್ರತಿಕ್ರಿಯಿಸಿದರು.

ವಿಜಯ ಕರ್ನಾಟಕ



## ಎನ್‌ಎಬಿಎಲ್ ಮನವಿಗೆ ಸ್ಪಂದಿಸಿದ ಎಂಸಿಐ | ರಿಪೋರ್ಟ್ ತರಲು ಎದುರಾಗಿದೆ ಹೊಸ ಸಂಕಟ

# ಲ್ಯಾಬ್ ವರದಿಗೆ ಎಂಬಿಬಿಎಸ್ ವೈದ್ಯರ ಸಹಿ ಕಡ್ಡಾಯ!


■ **ಸ್ಟೀವನ್ ರೇಗೊ** ಮಂಗಳೂರು

ದೇಶದ ಯಾವುದೇ ಲ್ಯಾಬ್‌ಗಳಿರಲಿ ಇನ್ನು ಮುಂದೆ ಲ್ಯಾಬ್ ರಿಪೋರ್ಟ್‌ಗಳಿಗೆ ಎಂಬಿಬಿಎಸ್ ವೈದ್ಯರೇ ಸಹಿ ಮಾಡಬೇಕು ಎನ್ನುವ ಮಹತ್ವದ ಆದೇಶವೊಂದನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ(ಎಂಸಿಐ) ಹೊರಡಿಸಿದೆ.

ಇದರಿಂದ ಲಕ್ಷಾಂತರ ಲ್ಯಾಬ್‌ಗಳಿಗೆ ಸಂಕಟ ಎದುರಾಗಿದೆ. ಇದರ ಜತೆಗೆ ಲ್ಯಾಬ್‌ಗಳಲ್ಲಿ ದುಡಿಯುತ್ತಿರುವ ಸಾವಿರಾರು ಮಂದಿ ಬೀದಿಪಾಲಾಗುವ ಆತಂಕವೂ ಉಂಟಾಗಿದೆ.

ಅಂದಹಾಗೆ ಈ ಹಿಂದೆ ಲ್ಯಾಬ್‌ನಲ್ಲಿ ಸಿದ್ಧವಾಗುವ ವರದಿಗಳಿಗೆ ಪಿಎಚ್.ಡಿ, ಎಂಎಸ್ಸಿ, ಲ್ಯಾಬ್ ಟೆಕ್ನೀಶನ್‌ನಂತಹ ಪರಿಣತರು ಸಹಿ ಮಾಡಬಹುದಿತ್ತು. ಎಂಬಿಬಿಎಸ್ ವೈದ್ಯರು ಸಹಿ ಮಾಡದ ಲ್ಯಾಬ್ ವರದಿಗಳಿಗೆ ಕವಡೆಯಷ್ಟೂ ಬೆಲೆ ಕೊಡಬೇಡಿ ಎಂದು ಎಂಸಿಎಐ ಜೂ. 14ರಂದು ಆದೇಶಿಸಿದೆ. ಅದರಲ್ಲೂ ಮುಖ್ಯವಾಗಿ ನ್ಯಾಷನಲ್ ಅಕ್ರೆಡೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಕ್ಯಾಲಿಬರೇಶನ್ ಲ್ಯಾಬೋರೇಟರೀಸ್ (ಎನ್‌ಎಬಿಎಲ್)ಯಲ್ಲಿ ನೋಂದಣಿಯಾಗಿರುವ ಲ್ಯಾಬ್‌ಗಳಿಗೆ ಈ ಆದೇಶ ರವಾನೆಯಾಗಿದೆ.





भारतीय आयुर्विज्ञान परिषद

MEDICAL COUNCIL OF INDIA

Date: 14/6/17

**ಎನ್‌ಎಬಿಎಲ್ ಮನವಿಗೆ ಎಂಸಿಐ ಅಸ್ತು:** ದೇಶದ ಲ್ಯಾಬ್‌ಗಳ ಗುಣ ಮಟ್ಟದಲ್ಲಿ ಏರುಪೇರುಗಳು ಕಾಣಿಸಿಕೊಳ್ಳುತ್ತಿವೆ. ಸರಿಯಾದ ಲ್ಯಾಬ್ ವರದಿಗಳು ವೈದ್ಯರಿಗೆ ಸಿಗುತ್ತಿಲ್ಲ. ವರದಿ ಸಿದ್ಧಪಡಿಸಲು ಮುಖ್ಯವಾಗಿ ಎಂಬಿಬಿಎಸ್ ವೈದ್ಯರನ್ನು ಬಳಸಿಕೊಂಡರೆ ಗುಣಮಟ್ಟದ ವಿಚಾರ ಸರಿಯಾಗುತ್ತದೆ ಎಂದು ಎನ್ ಎಬಿಎಲ್ ನಿರ್ದೇಶಕರು ಪತ್ರದ ಮೂಲಕ ಮನವಿ ಸಲ್ಲಿಸಿದ್ದರು. ಇದನ್ನು ಗಮನಿಸಿದ ಎಂಸಿಐ ನಿರ್ದೇಶಕರು ಈ ಹೊಸ ಆದೇಶ ನೀಡಿದ್ದಾರೆ.

''ಮೊದಲು ಎನ್‌ಎಬಿಎಲ್ ನೋಂದಣಿಯಾದ ಲ್ಯಾಬ್‌ಗಳಿಗೆ ಸಮಸ್ಯೆ ಆರಂಭವಾಗುತ್ತದೆ. ಬಳಿಕ ನಿಧಾನವಾಗಿ ರೋಗಿಗಳು ಕೂಡ ವೈದ್ಯರೇ ಸಹಿ ಮಾಡಬೇಕು ಎಂದು ಪಟ್ಟು ಹಿಡಿದು ಕೂರುತ್ತಾರೆ. ಕಟ್ಟು ನಿಟ್ಟಿನಲ್ಲಿ ಇದು ಜಾರಿಗೊಂಡಲ್ಲಿ ಲ್ಯಾಬ್‌ಗಳನ್ನು ಮುಚ್ಚಲೇ ಬೇಕಾಗುತ್ತದೆ. ಲ್ಯಾಬ್‌ಗಳ ಗುಣಮಟ್ಟದ ಕುರಿತೂ ಆಲೋಚನೆ ಮಾಡಬೇಕಿದೆ,'' ಎಂದು ಲ್ಯಾಬ್ ನಿರ್ದೇಶಕ ರಾಜೇಶ್ ಶೆಣೈ ಹೇಳುತ್ತಾರೆ.

ಮಂಗಳೂರಿನ ಲ್ಯಾಬ್ ಮಾಲೀಕ ವಿನ್ಸೆಂಟ್, ''ಇಂತಹ ಸುತ್ತೋಲೆ ಲ್ಯಾಬ್ ಮಾಲೀಕರಿಗೆ, ರೋಗಿಗಳಿಗೆ ಹೊರೆಯಾಗಲಿದೆ'' ಎನ್ನುತ್ತಾರೆ.

''ಎಂಸಿಐ ಸುತ್ತೋಲೆ ಒಳ್ಳೆಯದು. ಲ್ಯಾಬ್ ವರದಿ ಸರಿಯಾಗಿರದಿದ್ದಲ್ಲಿ ಔಷಧೋಪಚಾರವೂ ಸರಿಯಾಗದು'' ಎನ್ನುತ್ತಾರೆ ಲ್ಯಾಬ್ ಟೆಕ್ನೀಶನ್ ರವಿಚಂದ್ರ ಆರ್.ಸುವರ್ಣ. ಎಂಸಿಐ ಸುತ್ತೋಲೆ ಲ್ಯಾಬ್ ದುನಿಯಾದಲ್ಲಿ ಹೊಸ ಸಂಚಲನಕ್ಕೆ ಮುನ್ನುಡಿ ಬರೆದಿದೆ.